# ಊರಲ್ಲಿ ದನ ಮೇಯಿಸಿಕೊಂಡಿದ್ದೆ!

## ವಾಣಿ ಚನ್ನರಾಯಪಟ್ಟಣ

### ಝೀ ಕನ್ನಡ 'ಸತ್ಯ'ದ ಕಾವೇರಿ

■ ರಾಘವೇಂದ್ರ ಕೆ.



◆ **ಪಾತ್ರ ಮಾಡಬೇಕು ಎನ್ನುವ ಆಸೆ ಮೂಡಿದ್ದು ಹೇಗೆ?**

ಎಂಎನ್‌ಸಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿ ಏನಾದರೂ ಕಾರ್ಯಕ್ರಮಗಳು ನಡೆದರೆ ಕನ್ನಡದಲ್ಲಿ ಅಣಕ ಮಾಡಿ ರಂಜಿಸುತ್ತಿದ್ದೆ. ಅಲ್ಲಿನ ಪ್ರೋತ್ಸಾಹ ನಟನೆ ಬಗ್ಗೆ ಆಸಕ್ತಿಯನ್ನು ಹುಟ್ಟಿಸಿತು. ಅದು 'ಆಯಾಮ' ರಂಗ ತಂಡದಲ್ಲಿ ತೊಡಗಿಸಿತು. ಕೆಲಸಕ್ಕೆ ರಜೆ ಇದ್ದಾಗ ರಂಗ ಚಟುವಟಿಕೆ ಮಾಡುತ್ತಿದ್ದೆ. ಮೂರು ನಾಲ್ಕು ತಿಂಗಳಲ್ಲಿ ಒಂದೆರಡು ನಾಟಕ ಆಡಿದೆ. 'ಕಾಮಿಡಿ ಕಿಲಾಡಿಗಳು' 2ನೇ ಸೀಸನ್‌ಗೆ ಆಡಿಷನ್ ನಡೀತಾ ಇತ್ತು. ಅವತ್ತು 2000 ಜನ ಇದ್ದರು. ಮೂರು ಗಂಟೆಗೆ ನನ್ನ ಸರದಿ ಬಂತು. 'ಏನು ಮಾಡ್ತೀರಿ ಅಂದ್ರು'. ಮಂಡ್ಯದ ಕನ್ನಡದಲ್ಲಿ ಬಬ್ರುವಾಹನ ಏಕಪಾತ್ರ ಅಭಿನಯ ಮಾಡ್ತೀನಿ. ಸುದೀಪ್, ಸಾಯಿಕುಮಾರ್, ಚಿಕ್ಕಣ್ಣ ಅವರ ಅಣಕ ಮಾಡ್ತೀನಿ ಅಂತ ಹೇಳಿದೆ. ಭಿನ್ನ ವ್ಯಕ್ತಿ ಎಂದು ಅನ್ನಿಸಿ, ನಿರ್ದೇಶಕರನ್ನು ಕರೆಸಿಕೊಂಡರು. ಅವರು ಆಡಿಷನ್ ಟೆಸ್ಟ್ ತೆಗೆದುಕೊಂಡರು. ಕೆಒಂದು ವಾರದ ನಂತರ ಫೋನ್ ಮಾಡಿ. ಸಿದ್ಧತೆ ಮಾಡಿಕೊಂಡು ಎರಡನೇ ಸುತ್ತಿನ ಆಡಿಷನ್ನಿಗೆ ಬನ್ನಿ ಅಂದ್ರು. ನಂತರ ಮೆಗಾ ಆಡಿಷನ್ ಇರುತ್ತೆ ಎಂದು ಆಹ್ವಾನಿಸಿದರು. ಹೋದಾಗ ಸೆಲೆಕ್ಟ್ ಆಗಿದ್ದೀರಾ ಕೆಲಸ ಬಿಡಿ ಅಂದ್ರು. ನಿಜಕ್ಕೂ ಆಗ ನನಗೆ ಶಾಕ್ ಆಯಿತು. ಆಸಕ್ತಿ ಇದ್ದಿದ್ದರಿಂದ ನಟನೆಯನ್ನೇ ಆಯ್ಕೆ ಮಾಡಿಕೊಂಡೆ.

◆ **ನಿಮ್ಮ ಪರಿಚಯ ಹೇಳಿ.**

ಚನ್ನರಾಯಪಟ್ಟಣ ಸಮೀಪದ ಯಾಚನಹಳ್ಳಿ ನಮ್ಮೂರು. ಅಪ್ಪ ಮುರುಳಿ ಲಾರಿ ಚಾಲಕ ಆಗಿದ್ದರು. ಅಮ್ಮ ಪುಷ್ಪಾ, ಅವರು ಮನೆಯ ಕೆಲಸದ ಜೊತೆ ಕೃಷಿ ಕೆಲಸ ಮಾಡಿಸುತ್ತಿದ್ದರು. ಊರಲ್ಲೇ ಇದ್ದರೆ ತನ್ನ ಮಕ್ಕಳು ಹೀಗೆ ಇರಬೇಕಾಗುತ್ತದೆ ಎನ್ನುವ ಕೊರಗಿನಿಂದ ಅಮ್ಮ ನಮ್ಮನ್ನು ಬೆಂಗಳೂರಿಗೆ ಕರೆದುಕೊಂಡು ಬಂದರು. ಅವರಿಗೆ ಯಾವ ಕೆಲವೂ ಸಿಗಲಿಲ್ಲ. ಆಗ ಅನಿವಾರ್ಯಕ್ಕೆ ಮನೆ ಕೆಲಸಕ್ಕೆ ಹೋದರು. ಮನೆ ಕೆಲಸಕ್ಕೆ ಹೋಗಿದ್ದರಿಂದ ನಮ್ಮನ್ನು ಚೆನ್ನಾಗಿ ಓದಿಸಬೇಕೆಂಬ ಅಮ್ಮನ ಕನಸು ಇನ್ನೂ ಹೆಚ್ಚಾಯಿತು. ಮನೆ ಯಜಮಾನರ ಮಕ್ಕಳಂತೆ ತನ್ನ ಮಕ್ಕಳೂ ಓದಬೇಕು, ಕೆಲಸಕ್ಕೆ ಹೋಗಬೇಕು ಎಂದು ಯೋಚಿಸಿದರು. ಹಾಗಾಗಿ ಪ್ರತಿಷ್ಠಿತ ಕಾಲೇಜಿಗೆ ಸೇರಿಸಿದರು. ಮೊದಲ ದಿನದ ಕಾಲೇಜು ಬೇರೆ ಪ್ರಪಂಚಕ್ಕೆ ಹೋದಂತೆ ಅನ್ನಿಸಿತು. ಪದವಿ ಮುಗಿಯುತ್ತಿದ್ದಂತೆ ಬಹುರಾಷ್ಟ್ರೀಯ ಕಂಪನಿಯಲ್ಲಿ ಇಬ್ಬರಿಗೂ ಕೆಲಸ ಸಿಕ್ಕಿತು. ನಾವು ದುಡಿಯಲು ಶುರುಮಾಡಿದ ನಂತರ ನಮ್ಮ ಮನೆಯ ಪರಿಸ್ಥಿತಿ ಸುಧಾರಣೆ ಆಯಿತು. ಈಗ ಅಪ್ಪ ಖಾಸಗಿ ಶಾಲೆಯ ವಾಹನ ಓಡಿಸುತ್ತಿದ್ದಾರೆ. ಅಕ್ಕ ನಾನು ಸೇರಿ ಪೋಷಕರಿಗೆ ಮನೆಯನ್ನು ಕಟ್ಟಿಸಿಕೊಡುತ್ತಿದ್ದೇವೆ. ಇದಾದ ಮೇಲೆ ಮದುವೆಯ ಬಗ್ಗೆ ಯೋಚನೆ.

◆ **ಸತ್ಯದ ನಿಮ್ಮ ಪಾತ್ರದ ಬಗ್ಗೆ ಹೇಳುವುದಾದರೆ.**

ಸತ್ಯದ ಕಾವೇರಿ ಕಾಮಿಡಿ ಪಾತ್ರ. ಪುಟ್ಟದಾಗಿದ್ದರೂ ಒಳ್ಳೆಯ ಜನಪ್ರಿಯತೆಯನ್ನು ಗಳಿಸಿದೆ. ಎಷ್ಟೋ ಜನ ಈಗ 'ಕಾವೇರಿ' ಅಂತ ಗುರುತಿಸುತ್ತಾರೆ. ಮತ್ತೊಂದು ಧಾರಾವಾಹಿಗೆ ಕೆಲಸ ನಡೆಯುತ್ತಿದೆ. 'ಜೋಡಿ ನಂಬರ್ 1' ಸೇರಿದಂತೆ 'ಕಾಮಿಡಿ ಕಿಲಾಡಿಗಳು', 'ಡ್ರಾಮಾ ಜೂನಿಯರ್ಸ್' ಶೋಗಳಲ್ಲಿಯೂ ಆಗಾಗ ಕೆಲಸ ಮಾಡುತ್ತೇನೆ. ಏಳೆಂಟು ಕನ್ನಡ ಸಿನಿಮಾಗಳಲ್ಲಿ ಮಾಡಿದ್ದೇನೆ. ತೆಲುಗಿನಲ್ಲಿಯೂ ಒಂದು ಸಿನಿಮಾ ಮಾಡಿದ್ದೇನೆ.

◆ **ಇರುವ ಉದ್ಯೋಗ ಬಿಟ್ಟು ಕಾಮಿಡಿ ಶೋ ಕೈ ಹಿಡಿದು ಎದುರಿಸಿದ ಸವಾಲುಗಳು ಏನು?**

ರಂಗ ಪ್ರೇಮ ಏನಾದರೂ ಮಾಡಬೇಕು ಅನ್ನುವ ಕನಸಿಗೆ ಕಾರಣವಾಯಿತು. 'ಕಾಮಿಡಿ ಕಿಲಾಡಿಗಳು' ಕೂಡ ರಂಗಭೂಮಿಯ ತತ್ವದಂತೆಯೇ ಇತ್ತು. ಹಾಗಾಗಿ ಅದು ಆಪ್ತವಾಯಿತು. ಅದರಿಂದ ನನಗೆ ತುಂಬ ಜನಪ್ರಿಯತೆ ಸಿಕ್ಕಿತು. ಈ ಕ್ಷೇತ್ರ ಹೊಸದಾಗಿದ್ದರಿಂದ ಬೇರೆ ಅವಕಾಶಗಳು ಸಿಗುತ್ತಿರಲಿಲ್ಲ. ಮತ್ತೆ ಕೆಲಸಕ್ಕೆ ಹೋಗ್ಲಾ ಎಂದೂ ಯೋಚಿಸಿದ್ದೆ. ಯಾವತ್ತಿದ್ದರೂ ಕೆಲಸವನ್ನು ಮಾಡಬಹುದು. ಸ್ವಲ್ಪ ದಿನ ಇಲ್ಲೇ ಇರೋಣ ಎಂದು ಧೈರ್ಯ ಮಾಡಿದೆ. 'ಕಾಮಿಡಿ ಕಿಲಾಡಿಗಳು' ಬಳಗದ ಅಪ್ಪಣ್ಣ, ಸದಾನಂದ, ಮಿಂಚು, ಜೀರುಂಡೆ ರಘು, ನಾನು ಸೇರಿ ಜನ ರಂಜನೆಗೆ ಒಂದು ತಂಡವನ್ನು ಕಟ್ಟಿಕೊಂಡೆವು. ನಮ್ಮ ತಂಡ ರಾಜ್ಯ ಸುತ್ತಾಟವನ್ನು ಆರಂಭಿಸಿದೆವು. ಅದು ನಮಗೆ ಒಳ್ಳೆಯ ಸಂಪಾದನೆಯನ್ನು ತಂದುಕೊಟ್ಟಿತು. ಕ್ರಮೇಣ ಬೇರೆ ಬೇರೆ ಅವಕಾಶಗಳಿಗೂ ಅದೇ ವೇದಿಕೆ ಆಯಿತು.

ರಂಗಭೂಮಿಯಲ್ಲಿ ಅಲ್ಪ ಕಾಲದಲ್ಲಿ ಎರಡು ಗಂಭೀರ ನಾಟಕಗಳನ್ನು ಆಡಿದ್ದ ನಾನು ಕಾಮಿಡಿಗೆ ಬಂದ ಹೊಸತು ದೊಡ್ಡ ಸವಾಲೇ ಆಗಿತ್ತು. ಡಬಲ್ ಮೀನಿಂಗ್ ಇಲ್ಲದೆ ಕಾಮಿಡಿ ಮಾಡುವುದು ತುಂಬ ಕಷ್ಟ. ನಟಿ ಆಗ್ತೀನಿ ಅಂತ ಎಂದೂ ಎಣಿಸಿರಲಿಲ್ಲ. ಮನರಂಜಕಿ ಆಗಬೇಕು ಎನ್ನುವ ಭಾವನೆ ಮಾತ್ರ ಯಾವತ್ತೂ ಇತ್ತು. ನನ್ನ ಆಸೆಗೆ ಇಲ್ಲಿ ಇಂಬು ಸಿಕ್ಕಿದ್ದರಿಂದ ಖುಷಿಯಿಂದ ಈ ಕೆಲಸವನ್ನು ನಿರ್ವಹಿಸುತ್ತಿದ್ದೇನೆ.